**ದಿ: 26-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀಸವಾಲು: ಶ್ರೀ ಹೆಚ್ ಎಲ್ ಸಿ ವಕೀಲರಿಂದ:**

1. ಈ ದಾವೆಯನ್ನು ನಾನು ಹೊಲ ಖರೀದಿ ಮಾಡಿರುವ ಸಲುವಾಗಿ ಸಲ್ಲಿಸಿರುತ್ತೇನೆ. ದಾವಾ ಹೊಲ ಬಾಗೂರು ಸೀಮಾದ ಸರ್ವೆ ನಂಬರ್ 54 ಹಿಸ್ಸಾ-4, ವಿಸ್ತೀರ್ಣ 01 ಎಕರೆ 01 ಗುಂಟೆ ಇರುತ್ತದೆ. ದಾವಾ ಹೊಲವನ್ನು ಯಂಕಣ್ಣ ಇವರ ಕಡೆಯಿಂದ ಖರೀದಿ ಮಾಡಿರುತ್ತೇನೆ. ಅವರ ತಂದೆಯ ಹೆಸರು ನನಗೆ ನೆನಪಿಲ್ಲ. ದಾವಾ ಹೊಲವನ್ನು ನಾನು ನೋಡಿರುತ್ತೇನೆ. ದಾವೆಯ ಹೊಲದ ಚಕ್ ಬಂದಿ ಕ್ರಯಪತ್ರದಲ್ಲಿ ಬರೆಸಿರುತ್ತಾರೆ. ಇದರ ಚಕ್ ಬಂದಿ ನನಗೆ ಹೇಳಲು ಬರುವುದಿಲ್ಲ. ಆದರೆ ದಾವಾ ಹೊಲ ಭಾಗಮ್ಮ ಗುಡಿ ಹಿಂದುಗಡೆ ಬರುತ್ತದೆ. ಖರೀದಿ ಮಅಡುವ ಕಾಲಕ್ಕೆ ದಾವಾ ಹೊಲ ಯಂಕಣ್ಣನ ಹೆಸರಿನಲ್ಲಿತ್ತು. ಖರೀದಿ ಪತ್ರ ಕನ್ನಡ ಭಾಷೆಯಲ್ಲಿ ಬರೆದಿರುತ್ತಾರೆ. ಖರೀದಿ ವ್ಯವಹಾರವು ರೂ 2,72,000/- ಗಳಿಗೆ ಆಗಿರುತ್ತದೆ. ಅದರಲ್ಲಿ ರೂ 2,70,000/- ಕೊಟ್ಟಿರುತ್ತೇನೆ. ಇನ್ನೂ 2000/- ಉಳಿದಿರುತ್ತದೆ. ಹಣವನ್ನು ನಗದು ರೂಪದಲ್ಲಿ ನನ್ನ ಮನೆಯ ಹತ್ತಿರ ಕೊಟ್ಟಿರುತ್ತೇನೆ. ಹಣವನ್ನು ಕರಾರುಪತ್ರ ಆಗುವ 2 ದಿನ ಮುಂಚೆ ಕೊಟ್ಟಿರುತ್ತೇನೆ. ಖರೀದಿ ಪತ್ರವು ದಿನಾಂಕ: 28-12-2020 ರಂದು ಆಗಿರುತ್ತದೆ.

2. ದಾವಾ ಹೊಲವು 1ನೇ ಪ್ರತಿವಾದಿಯ ಹಿರಿಯರ ಆಸ್ತಿಯಾಗಿರುತ್ತದೆ ಎಂದರೆ ಸರಿ. ದಾವಾ ಹೊಲ ಇವತ್ತಿಗೂ 1ನೇ ಪ್ರತಿವಾದಿಯ ಕಬ್ಜಾದಲ್ಲಿರುತ್ತದೆ ಎಂದರೆ ಸರಿ. ಖರೀದಿ ಕರಾರು ಪತ್ರ ಬರೆದುಕೊಡುವ ಕಾಲಕ್ಕೆ ಸಾಕ್ಷಿದಾರರಾಗಿ ಯಲ್ಲಪ್ಪ ತಂದೆ ನರಸಯ್ಯ ಮತ್ತು ಭೀಮರಾಯ ತಂದೆ ಪರಮಯ್ಯ ಇವರು ಸಾಕ್ಷಿದಾರರಾಗಿದ್ದರು. 1ನೇ ಪ್ರತಿವಾದಿ ನನಗೆ 2015 ರಿಂದ ಪರಿಚಯ ಇರುತ್ತಾನೆ. ಸಾಕ್ಷಿದಾರರಾದ ಯಲ್ಲಪ್ಪ ಮತ್ತು ಬೀಮರಾಯ ಇವರು ಬರವಣಿಗೆಯಲ್ಲಿ ಸಹಿ ಮಾಡಿರುತ್ತಾರೆ. 1ನೇ ಪ್ರತಿವಾದಿ ಬರವಣಿಗೆಯಲ್ಲಿ ಸಹಿ ಮಾಡಿರುತ್ತಾನೆ. ನಿ ಪಿ 1 ರಂತೆ ಖರೀದಿಕರಾರು ಪತ್ರವನ್ನು 1ನೇ ಪ್ರತಿವಾದಿ ಸಾಕ್ಷಿದಾರರ ಸಮಕ್ಷಮದಲ್ಲಿ ನಿಮ್ಮ ಪರವಾಗಿ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಿ ಪಿ 1 ರಂತೆ ಖರೀದಿಕರಾರು ಪತ್ರದಲ್ಲಿರುವ 1ನೇ ಪ್ರತಿವಾದಿಯ ಸಹಿ ಅವರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 1ನೇ

ಪ್ರತಿವಾದಿಯ ಹೆಂಡತಿ ಬಸ್ಸಮ್ಮ ಇವರು ಪರಿಚಯ ಇರುತ್ತಾರೆ 2ನೇ ಪ್ರತಿವಾದಿಯನ್ನು ನೀವು ವಿಚಾರಣೆ ಮಾಡಿದ್ದೀರಾ ಎಂದರೆ ಸಾಕ್ಷಿಯು ಖರೀದಿ ಕರಾರು ಆಗುವಾಗ ಅವರನ್ನು ಕರೆದುಕೊಂಡು ಬನ್ನಿ ಎಂದು 1ನೇ ಪ್ರತಿವಾದಿಗೆ ಹೇಳಿದ್ದು ಅವರು ಕರೆದುಕೊಂಡು ಬಂದಿಲ್ಲ ಎನ್ನು ತ್ತಾರೆ.

3. ಖರೀದಿ ಕರಾರು ಪತ್ರ ಬರೆದುಕೊಟ್ಟ ನಂತರ 1ನೇ ಪ್ರತಿವಾದಿ ಮನೆಗೆ ಊರಿನ ಗ್ರಾಮಸ್ಥರೊಂದಿಗೆ 2-3 ಭಾರಿ ಹೋಗಿರುತ್ತೇನೆ. ನಿ ಪಿ 1 ರಂತೆ 1ನೇ ಪ್ರತಿವಾದಿ ಖರೀದಿ ಕರಾರು ಪತ್ರವ ನ್ನು ನಿಮಗೆ ಬರೆದುಕೊಟ್ಟಿದ್ದಾನೆಂದು ನೀವು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಖರೀದಿ ಕರಾರು ಪತ್ರ ಬರೆದುಕೊಟ್ಟ ನಂತರ 1ನೇ ಪ್ರತಿವಾದಿ ಮನೆಗೆ ಊರಿನ ಗ್ರಾಮಸ್ಥರೊಂದಿಗೆ 2-3 ಭಾರಿ ಹೋಗಿರುತ್ತೇನೆ ಎಂದು ನೀವು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಖರೀದಿ ವ್ಯವಹಾರದಲ್ಲಿ ರೂ 2,70,000/- ನಗದು ರೂಪದಲ್ಲಿ 1ನೇ ಪ್ರತಿವಾದಿಗೆ ಕೊಟ್ಟಿದ್ದೀರಿ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಖರೀದಿ ವ್ಯವಹಾರ ಆದ ಮೇಲೆ 2024 ರವರೆಗೆ 1ನೇ ಪ್ರತಿವಾದಿಗೆ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ ಏಕೆಂದರೆ ಖರೀದಿ ಕರಾರು ಪತ್ರ ಸೃಷ್ಟಿ ಮಾಡಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿದಾರರಾದ ಯಲ್ಲಪ್ಪ ಮತ್ತು ಭೀಮರಾಯ ಇವರು ನಿ ಪಿ 1 ಖರೀದಿ ಕರಾರು ಪತ್ರಕ್ಕೆ ಸಾಕ್ಷಿದಾರರಾಗಿರಲಿಲ್ಲ ಎಂದರೆ ಸರಿಯಲ್ಲ. ನೀವು ಸುಳ್ಳು ಖರೀದಿ ಕರಾರು ಪತ್ರ ಸೃಷ್ಟಿ ಮಾಡಿ ಸುಳ್ಳು ದಾವೆ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ವಾದ ಪತ್ರ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿರುವ ಎಲ್ಲಾ ವಿಷಯಗಳು ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ